# ಬದುಕಿನ ಹಂಬಲ; ಹೋರಾಟದ ಛಲ!

ಸವಿತಾ ಶಾಂತಪ್ರಿಯ

**ಪ್ರತೀವರ್ಷವೂ ಮಾರ್ಚ್ 8ರಂದು ಆಚರಿಸುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಔಚಿತ್ಯಪೂರ್ಣವೇ ಎಂಬುದು ಇದೀಗ ಚರ್ಚೆಗೆ ಗ್ರಾಸ ಒದಗಿಸಿದೆ. ಆ ಒಂದು ದಿನ ಮಾತ್ರ ದಿನಾಚರಣೆ ಸಂಭ್ರಮಿಸಿ ಮರೆತು ಬಿಡುವ, ಯಾವೊಂದು ನಿರ್ಧಾರ, ಆಶಯವನ್ನೂ ಅನುಷ್ಠಾನಕ್ಕೆ ತರದೇ ಇರುವಾಗ ಮಹಿಳಾ ದಿನಾಚರಣೆ ಅಗತ್ಯವಿದೆಯೇ ಎಂಬುದು ಪ್ರಶ್ನೆ.**

ಮಹಿಳಾ ಸಶಕ್ತೀಕರಣ, ಮಹಿಳಾ ಸ್ವಾತಂತ್ರ್ಯ, ಮಹಿಳಾ ಸಮಾನತೆ ಮುಂತಾದ ಘೋಷಣಾ ವಾಕ್ಯಗಳು ಮಹಿಳಾ ದಿನಾಚರಣೆಯ ದಿನ ಸಮೀಪಿಸುತ್ತಿದ್ದಂತೆ ಹೆಚ್ಚು ಹೆಚ್ಚಾಗಿ ಕೇಳಿಬರತೊಡಗುತ್ತದೆ. ಮಹಿಳೆಯರ ದೌರ್ಜನ್ಯದ ವಿರುದ್ಧ ಹೋರಾಟ, ಜಾಥಾ, ವಿಚಾರಸಂಕಿರಣ ಮುಂತಾದ ಕಾರ್ಯಕ್ರಮಗಳು ಕ್ಲೀಷೆಯೆನಿಸಿದರೂ ನಡೆಯುತ್ತವೆ. ಕಾರ್ಯಕ್ರಮಗಳು ಮುಗಿದ ತಕ್ಷಣ ದೊಡ್ಡ ದೊಡ್ಡ ಬ್ಯಾನರ್‌ಗಳು ಮುಂದಿನ ವರ್ಷದ ಕಾರ್ಯಕ್ರಮಗಳಿಗಾಗಿ ಜಾಗ್ರತೆಯಿಂದ ಕಪಾಟು ಸೇರುತ್ತವೆ, ಒಂದಿಷ್ಟು ವರದಿಗಳು ಪತ್ರಿಕೆಗಳಲ್ಲಿ, ಟೀವಿಗಳಲ್ಲಿ ಮೂಡುತ್ತವೆ. ದಿನ ಕಳೆದಂತೆ ಮತ್ತೆ ಎಲ್ಲವೂ ಮರೆತು ಹೋಗಿ ದಿನಗಳುರುಳುತ್ತವೆ. ಮತ್ತೆ ಇನ್ನೊಂದು ಅಂತರರಾಷ್ಟ್ರೀಯ ಮಹಿಳಾ ದಿನ ಬರುವ ವರೆಗೆ ಆ ವಿಷಯದ ಕುರಿತಾಗಿ ಯಾವ ಚಿಂತನೆಯೂ ನಡೆಯುವುದಿಲ್ಲ.

ಮಹಿಳಾ ದಿನಾಚರಣೆ ಎಂಬುದಿದೆಯೇ ಹೊರತು ಪುರುಷ ದಿನಾಚರಣೆ ಇಲ್ಲವಲ್ಲ ಎಂಬ ಯೋಚನೆ ಮನದ ಆಳದಲ್ಲಿ ಒಮ್ಮೆ ಹಾದು ಹೋದದ್ದು ನಿಜ. ತಕ್ಷಣ ನಿಜದ ಅರಿವಾಯಿತು. ಒಂದು ದಿನ ಹೊರತುಪಡಿಸಿ ಉಳಿದೆಲ್ಲ ದಿನಗಳೂ ಪುರುಷ ದಿನಗಳೇ. ಹಾಗಿದ್ದರೆ ಈ ಮಹಿಳಾ ದಿನಾಚರಣೆ ಹಿನ್ನೆಲೆ ಏನು ಎಂಬುದರ ಕುರಿತು ಒಂದಿಷ್ಟು ಚಿಂತನೆ ನಡೆಸಬೇಕಾಗಿದೆ. ಈ ದಿನಾಚರಣೆಯ ಉದ್ದೇಶವೇ ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಾಧನೆಗಳನ್ನು ಗುರುತಿಸುವುದು, ಪ್ರೋತ್ಸಾಹಿಸುವುದು, ಅಭಿನಂದಿಸುವುದು, ಸಮಾನತೆಯನ್ನು ಎತ್ತಿ ಹಿಡಿಯುವುದು ಹಾಗೂ ಮಹಿಳಾ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವುದು.

'ನಾನು ಸಮಾನತೆಯ ತಲೆಮಾರು: ಮಹಿಳೆಯರ ಹಕ್ಕುಗಳನ್ನು ಅರಿತುಕೊಳ್ಳುವುದು' (**I am Generation Equality: Realising Women's Rights**) ಇದು 2020ರ ಆಚರಣೆಯ ಮುಖ್ಯ ಉದ್ದೇಶ.

ವಿಶ್ವ ಮಹಿಳಾ ದಿನಾಚರಣೆ ಸಂಭ್ರಮ ಎಲ್ಲವೂ ಸರಿ. ಮಹಿಳಾ ಹಕ್ಕಿಗಾಗಿ ಸಮಾನತೆಗಾಗಿ ಹೋರಾಟವೂ ಸರಿ. ಆದರೆ ಎಷ್ಟೋ ಸಂದರ್ಭಗಳಲ್ಲಿ ಹೋರಾಟವೆಂಬ ಪದ ಕ್ಲೀಷೆಯಾಗುವುದೂ ಉಂಟು. ಹೋರಾಟ ಕೆಲವರ ಸೊತ್ತಾಗಿ ಹೋರಾಟಕ್ಕಾಗಿ ಹೋರಾಟವೆನಿಸುತ್ತದೆಯೇ ಹೊರತು ಮಹಿಳೆಯ ಸ್ವತಂತ್ರ ಮನೋಭೂಮಿಕೆಗಾಗಿ ಪರಿಸ್ಥಿತಿ ನಿರ್ಮಾಣವಾಗುತ್ತಿಲ್ಲ. ವೇದಿಕೆಯ ಮೇಲೆ ನಿಂತು ಮಹಿಳಾ ಶೋಷಣೆಯ ವಿರುದ್ಧ ಘೋಷಣೆ ಕೂಗಿದ ಮಹಿಳೆಯೂ ಮನೆಯಲ್ಲಿ ತನ್ನ ವಿರುದ್ಧ ನಡೆಯುವ ದೌರ್ಜನ್ಯದ ವಿರುದ್ಧ ಹೋರಾಡಲು ಹಿಂಜರಿಯುತ್ತಾಳೆ. ಮತ್ತೊಬ್ಬರ ಹಕ್ಕಿಗಾಗಿ ಹೋರಾಡಲು ಮುಂಚೂಣಿಯಲ್ಲಿ ನಿಲ್ಲುವ ಅವರ ಹಕ್ಕಿಗಾಗಿ ಸ್ವರ ಎತ್ತಬೇಕಾದಾಗ ಅವರ ದನಿ ಅಡಗುವುದು ಸುಳ್ಳಲ್ಲ. ಮಹಿಳೆಯ ಪಾಡೂ ಇದುವೇ.

ಮಹಿಳೆಯರೂ ಆ ನಿಟ್ಟಿನಲ್ಲಿ ಸಹಕರಿಸುತ್ತಿಲ್ಲ. ನಿಜವಾಗಿ ಆ ದೃಷ್ಟಿಯಿಂದ ಆಕೆ ಪ್ರಯತ್ನವೂ ಪಡುತ್ತಿಲ್ಲ. ಇಷ್ಟಕ್ಕೆಲ್ಲ ಮುಖ್ಯ ಕಾರಣ ಮಹಿಳೆಯರು ಎಷ್ಟೇ ವಿದ್ಯಾಭ್ಯಾಸ ಪಡೆದರೂ ಸಮಾಜದಲ್ಲಿ ಮೇಲ್‌ಸ್ತರದಲ್ಲಿ ಜೀವನ ನಡೆಸುತ್ತಿದ್ದರೂ ಮಾನಸಿಕವಾಗಿ ಸ್ವತಂತ್ರರಾಗಿಲ್ಲ. ದಾಸೀ ಭಾವ ಇನ್ನೂ ಅವರಲ್ಲು ಸಾಕಷ್ಟು ಇದೆ. ಅದರಿಂದಾಗಿ ಸ್ವತಂತ್ರ ನಿರ್ಧಾರ ಹೆಚ್ಚಿನ ಸಂದರ್ಭಗಳಲ್ಲಿ ಆಕೆಗೆ ತುಂಬಾ ಕಠಿಣವೆನಿಸುತ್ತದೆ.

## ಶತಮಾನ ಕಳೆದರೂ ಅದೇ ನಿಲುವು!

ಇಂದಿಗೆ ಮಹಿಳಾ ದಿನಾಚರಣೆ ಆರಂಭಗೊಂಡು ಒಂದು ಶತಮಾನ ಕಳೆದಿದೆ. ಇಷ್ಟು ವರ್ಷಗಳಿಂದ ಮಹಿಳಾ ದಿನಾಚರಣೆ ನಡೆದರೂ ಇಂದಿಗೂ ಮಹಿಳೆಯರ ವಿರುದ್ಧದ ದೌರ್ಜನ್ಯ ಕಡಿಮೆಯಾಗಿಲ್ಲ. ಆಕೆಯ ಬಗೆಗೆ ತಾತ್ಸಾರ ಹೋಗಿಲ್ಲ. ಆಕೆಯನ್ನು ಹಸಿದ ಕಣ್ಣುಗಳಿಂದ ಕನ್ನಡಕದೊಳಗಿಂದಾದರೂ ನೋಡುವ ಮೃಗನೇತ್ರಗಳು ಕಡಿಮೆಯಾಗಿಲ್ಲ. 'ಹೆಣ್ಣು ಮಕ್ಕಳೆಯಾ....' ಎಂಬ ಪ್ರಶ್ನೆ ಇನ್ನೂ ಹೆಣ್ಣು ಹೆತ್ತ ಪೋಷಕರನ್ನು ಬಿಡುತ್ತಿಲ್ಲ. ಮಹಿಳೆಯರ ವಿರುದ್ಧ ದೌರ್ಜನ್ಯ, ಹಿಂಸೆ ನಡೆಯುತ್ತಲೇ ಇದೆ, ಇದರ ವಿರುದ್ಧ ಹೋರಾಟವೂ ನಡೆಯುತ್ತಿದೆ. ಇಷ್ಟೆಲ್ಲಾ ಇದ್ದರೂ ನಮ್ಮ ನಿಮ್ಮ ನಡುವೆ ನಮಗರಿವಿಲ್ಲದೆ ಮಹಿಳೆಯರ ಬಗೆಗಿನ ತಾರತಮ್ಯದ ಬಗೆಗೆ ಒಂದಿಷ್ಟು ಚಿಂತನೆಯಾದರೂ ನಡೆದರೆ ಈ ಸಂದರ್ಭಕ್ಕೆ ಹೆಚ್ಚು ಸೂಕ್ತ ಎಂಬ ಉದ್ದೇಶದಿಂದ ಚಿಂತನೆ ನಡೆಸಬೇಕಾಗಿದೆ.

ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿನಿಯರು ಮುಂದಿದ್ದರೂ ನಿಜವಾಗಿಯೂ ಆಯಕಟ್ಟಿನ ಜಾಗದಲ್ಲಿ ಅವರ ಸಂಖ್ಯೆ ತೀರಾ ಕಡಿಮೆ. ಹೆಚ್ಚಿನ ಮಹಿಳೆಯರು ಗುಮಾಸ್ತೆಯ ಮಟ್ಟದಲ್ಲೇ ನೆಮ್ಮದಿ ಕಾಣುತ್ತಾರೆ. ಒಂದು ಬಾರಿ ಹಿರಿಯ ಪುರುಷ ಅಧಿಕಾರಿಯೊಬ್ಬರು ತಮ್ಮ ಸಮಾನ ಮನಸ್ಕರೊಂದಿಗೆ ಮಾತಾಡುತ್ತಿದ್ದುದನ್ನು ಕೇಳಿ ಮೈ ಉರಿದು ಹೋಗಿತ್ತು. ಅವರು ಹೇಳುತ್ತಿದ್ದರು...'ಹೆಂಗಸರಿಗೇನು ಸರ್, ಸ್ವಲ್ಪ ಹೊಗಳಿದರೆ ಸಾಕು, ಎಂತ ಕೆಲಸಕ್ಕೂ ಸೈ. ಎಷ್ಟು ಬೇಕಾದರೂ ಕೆಲಸ ತೆಗೆಯಬಹುದು. ಸಾಂಸಾರಿಕವಾಗಿ ತೊಂದರೆ ಇರುವ ಹೆಂಗಸರಾದರೆ ಅವರನ್ನು ಕೇಳುವವರೂ ಇರುವುದಿಲ್ಲ. ಜೀವನೋಪಾಯಕ್ಕಾಗಿ ಎಷ್ಟು ಬೇಕಾದರೂ ಕೆಲಸ ಮಾಡುತ್ತಾರೆ. ಎಷ್ಟು ಬೈದರೂ ಸಹಿಸಿಕೊಳ್ಳುತ್ತಾರೆ'. ಅಯ್ಯೋ ನಮ್ಮ ಸಮಾಜದ ಮನಃಸ್ಥಿತಿಯೇ ಅನ್ನಿಸಿದ್ದು ಸುಳ್ಳಲ್ಲ..